
# ವಿದ್ಯಾಭ್ಯಾಸದ ಪಂಚಶೀಲಗಳು

ಸ್ವಾಮಿ ಜಗದಾತ್ಮಾನಂದ

ವಿದ್ಯಾಭ್ಯಾಸವೆಂದರೆ ಬರಿ ಓದು, ಬರಹ ಕಲಿಯುವುದಲ್ಲ; ಅದು ವ್ಯಕ್ತಿಯ ಸರ್ವತೋಮುಖ ಬೆಳವಣಿಗೆ. ಈ ಅಂಶವನ್ನು ತಮ್ಮ ಪಂಚಶೀಲ ಸೂತ್ರಗಳಲ್ಲಿ ಸಮಗ್ರವಾಗಿ ಅಳವಡಿಸಿ, ನಮಗೆ ನೀಡಿರುವ ಪೂಜ್ಯ ಸ್ವಾಮೀಜಿಯವರು, ತಮ್ಮ ಮಹತ್ವದ ಕೃತಿಯಾದ 'ಬದುಕಲು ಕಲಿಯಿರಿ' ಪುಸ್ತಕದ ಮೂಲಕ, ನಾಡಿನಲ್ಲೆಲ್ಲ ಪ್ರಖ್ಯಾತರಾದವರು. ಇವರು ಅತ್ಯುತ್ತಮ ವಾಗ್ಮಿಗಳು. ಹಾಗೆಯೇ ಶ್ರೇಷ್ಠ ಚಿಂತಕರು ಕೂಡ.

ವ್ಯಕ್ತಿಯ ಅಭ್ಯುದಯಕ್ಕೂ, ಸಮಾಜಕಲ್ಯಾಣಕ್ಕೂ ಕಾರಣವಾಗುವ ಜ್ಞಾನ ಮತ್ತು ದಕ್ಷತೆಗಳನ್ನು ಮೊದಲು ಸಂಪಾದಿಸಿ, ಆ ಬಳಿಕ ಅದನ್ನು ಇತರರಿಗೆ ನೀಡುವುದೇ ವಿದ್ಯಾಭ್ಯಾಸದ ಮುಖ್ಯ ಉದ್ದೇಶ ಎನ್ನಬಹುದು. ಈ ಉದ್ದೇಶದ ಸಫಲತೆಗಾಗಿ, ಪಂಚಶೀಲವೆಂದು ಕರೆಯಲಾಗುವ ಈ ಐದು ಪ್ರಮುಖ ಸೂತ್ರಗಳನ್ನು ಅನುಸರಿಸಬೇಕು.



**೧. ಜಿಜ್ಞಾಸೆ ಅಥವಾ ಅರಿವಿನ ಹಂಬಲ :** ಮನುಷ್ಯನಲ್ಲಿ ಈ ಪ್ರಮುಖ ಅಥವಾ ಪ್ರಬಲವಾದ ಅನಿಸಿಕೆಗಳು ಕಂಡುಬರುತ್ತವೆ: **ಬದುಕಬೇಕೆಂಬ ಆಸೆ, ಅರಿಯಬೇಕೆಂಬ ಆಸೆ, ಸುಖ ಅಥವಾ ಆನಂದವನ್ನು ಪಡೆಯಬೇಕೆಂಬ ಆಸೆ.** ಇವುಗಳಲ್ಲಿ ಅರಿವಿನ ಹಂಬಲವು ಇತರ ಆಸೆಗಳನ್ನು ನಿಯಂತ್ರಿಸುತ್ತಿರುತ್ತದೆ. ಆದುದರಿಂದ ವಿದ್ಯಾಭ್ಯಾಸದಲ್ಲಿ ತೀವ್ರವಾದ ಅರಿವಿನ ಹಂಬಲವನ್ನು ಬೆಳೆಸಿಕೊಳ್ಳುವುದಕ್ಕೆ ಪ್ರಥಮ ಸ್ಥಾನವಿದೆ. ಜಿಜ್ಞಾಸೆ ಎಂದರೆ ಕೇವಲ ಕ್ಷಣಿಕ ಕುತೂಹಲವಲ್ಲ. ಅದು **೧. ಜ್ಞಾನಕ್ಕಾಗಿ ಜ್ಞಾನವನ್ನು ಪಡೆಯುವ ಹಂಬಲ ೨. ಚರಮಸತ್ಯವನ್ನು ತಿಳಿಯಬೇಕೆಂಬ ನಿಜವಾದ ಅಭೀಪ್ಸೆ.**

೨. **ಶ್ರದ್ಧೆ :** ಶ್ರದ್ಧೆ ಎಂದರೆ ಕೇವಲ ಸಾಮಾನ್ಯ ನಂಬಿಕೆಯಲ್ಲ. ಈ ಮೂರು ವಿಷಯಗಳಲ್ಲಿ ಪೂರ್ಣ ವಿಶ್ವಾಸ: **೧. ತನ್ನ ದಿವ್ಯತೆಯಲ್ಲಿ, ತನ್ನಲ್ಲಿ ಅಡಗಿರುವ ಅಪಾರಶಕ್ತಿಯಲ್ಲಿ, ೨.ಸರ್ವಶಕ್ತನಾದ ಭಗವಂತನಲ್ಲಿ, ೩. ಸದ್ಗುಣಗಳಿಂದಲೇ ನಿಜವಾದ ಯಶಸ್ಸು ಎನ್ನುವ ವಿಶ್ವದ ನೈತಿಕ ನಿಯಮ ಅಥವಾ ಧರ್ಮ – ಇವುಗಳಲ್ಲಿ ಶ್ರದ್ಧೆ.**

೩. **ಶಕ್ತಿ :** ಇದು ಕೇವಲ ಪಾಶವೀ ಬಲವಲ್ಲ ಅಥವಾ ಮತ್ತೊಬ್ಬನನ್ನು ಸೋಲಿಸಿ ನಾಶಪಡಿಸುವ ವಿಧ್ವಂಸಕಾರಿ ಸಾಮರ್ಥ್ಯವೂ ಅಲ್ಲ. ಅದು, ೧. ತನ್ನ ಕರ್ತವ್ಯವನ್ನು ಸಮರ್ಪಕ ರೀತಿಯಲ್ಲಿ ನಿರ್ವಹಿಸಲು ಬೇಕಾದ **ದೈಹಿಕ ಶಕ್ತಿ** ; ೨.ಅನಿವಾರ್ಯವಾಗಿ ಜೀವನದಲ್ಲಿ ಬರುವ ಕಷ್ಟಸಂಕಷ್ಟಗಳನ್ನು ಎದುರಿಸುವ **ಮಾನಸಿಕ ಶಕ್ತಿ** ೩. ಎಲ್ಲ ರೀತಿಯ ಭೋಗ ಅಥವಾ ಸುಖಗಳಲ್ಲಿ ಸಂಯಮ ಹಾಗೂ **ಸ್ವನಿಯಂತ್ರಣವನ್ನು ಪಡೆದುಕೊಳ್ಳುವ ಶಕ್ತಿ** ೪. ಕೈಗೊಂಡ ಯಾವುದೇ ಕೆಲಸಕಾರ್ಯವನ್ನಾಗಲಿ, ಧ್ಯಾನಸಾಧನೆಯನ್ನಾಗಲಿ, ಏಕಾಗ್ರಚಿತ್ತದಿಂದ ನಿರಂತರ **ಸಾಧಿಸುವ ಶಕ್ತಿ.**

೪. **ನೀತಿ:** ಇದು ಈ ಕೆಳಗಿನ ಗುಣಗಳನ್ನು ಹೊಂದಿದೆ: ೧. ಸತ್ಯ, ಅಹಿಂಸೆ, ಬ್ರಹ್ಮಚರ್ಯಗಳೇ ಮೊದಲಾದ **ವೈಯಕ್ತಿಕ ನೈತಿಕ ಸಾಮಾನ್ಯ ಸೂತ್ರಗಳು** ೨. ಗುರುಹಿರಿಯರಿಗೆ ಗೌರವ, ಪರಿಶ್ರಮದ ಬಗ್ಗೆ ಗೌರವ, ಯಾರನ್ನೂ ಶೋಷಿಸದ ಪ್ರವೃತ್ತಿ ಮುಂತಾದ **ಸಾಮಾಜಿಕ ನೈತಿಕ ಸೂತ್ರಗಳು** ೩. ದೇಶಭಕ್ತಿ, ಧರ್ಮಸಮನ್ವಯದೃಷ್ಟಿ, ಅಂತರರಾಷ್ಟ್ರೀಯ ಅರಿವು – ಇವೇ ಮೊದಲಾದ **ಸಾಮೂಹಿಕ ನೈತಿಕ ಸೂತ್ರಗಳು.**

೫. **ಸೇವೆ:** ಸೇವೆ ಎಂದರೆ ಕೆಲವು ಸೀಮಿತ ಕಾರ್ಯಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಅದು ಜೀವನದ ಒಂದು ಅವಿಭಾಜ್ಯ ಅಂಗವಾಗಬೇಕು. ಸಾಮಾಜಿಕ ಜೀವನವನ್ನು ನೋಡುವ ಒಂದು ಮೂಲಭೂತ ದೃಷ್ಟಿಕೋನವೇ ಅದಾಗಬೇಕು. ಸೇವೆಯ ಜೀವನವಿಧಾನದಲ್ಲಿ ನಾಲ್ಕು ಅಂಶಗಳು ಇರುತ್ತವೆ: **೧. ತಂದೆತಾಯಿಗಳ ಸೇವೆ; ೨. ಸಜ್ಜನರ ಸಂತ ಮಹಾತ್ಮರ, ಗುರುಗಳ ಸೇವೆ; ೩. ಬಡಜನರ ಹಾಗೂ ರೋಗಿಗಳ ಸೇವೆ; ೪. ತಾನು ಮಾಡುವ ಕಾರ್ಯದ ಮೂಲಕ ಮಾನವಕುಲದ ಸೇವೆ.**